# ಸಿನಿಮಾ ಕೆಲಸಗಾರರ ಕಲ್ಯಾಣ ನಿಧಿ ಅಧಿನಿಯಮ, 1981

**04.03.2002ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 22ನೇ ಸಂಪುಟದ 1ನೇ ಸಂಚಿಕೆಯಲ್ಲಿ 04 ರಿಂದ 07ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಸಿನಿಮಾ ಕೆಲಸಗಾರರ ಕಲ್ಯಾಣ ನಿಧಿ
4. ನಿಧಿಯ ವಿನಿಯೋಗ
5. ಸಲಹಾ ಸಮಿತಿಗಳು
6. ಕೇಂದ್ರ ಸಲಹಾ ಸಮಿತಿ
7. ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳುವ ಅಧಿಕಾರ, ಇತ್ಯಾದಿ
8. ಕಲ್ಯಾಣ ಕಮೀಷನರ್‌ಗಳು, ಇತ್ಯಾದಿಯವರ ನೇಮಕಾತಿ ಮತ್ತು ಅವರ ಅಧಿಕಾರಗಳು.
9. ಈ ಅಧಿನಿಯಮದ ಮೇರೆಗೆ ಹಣಕಾಸು ಒದಗಿಸಿದ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿ
10. ಮಾಹಿತಿಯನ್ನು ತರಿಸಿಕೊಳ್ಳುವ ಅಧಿಕಾರ
11. ನಿಯಮ ರಚನಾಧಿಕಾರ

# ಸಿನಿಮಾ ಕೆಲಸಗಾರರ ಕಲ್ಯಾಣ ನಿಧಿ ಅಧಿನಿಯಮ, 1981

**(1981ರ 33)**

[17ನೇ ಸೆಪ್ಟೆಂಬರ್, 1981]

ಕೆಲವು ಚಲನಚಿತ್ರ ಕೆಲಸಗಾರರ ಕಲ್ಯಾಣವನ್ನು ಸಂವರ್ಧಿಸುವ ಚಟುವಟಿಕೆಗಳ ಬಗ್ಗೆ ಹಣಕಾಸು ಒದಗಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಸಿನಿಮಾ ಕೆಲಸಗಾರರ ಕಲ್ಯಾಣ ನಿಧಿ ಅಧಿನಿಯಮ,1981 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಿನಿಮಾ" ಎಂಬುದು ಚಲನಚಿತ್ರ ಅಧಿನಿಯಮ, 1952ರಲ್ಲಿ ಇರುವಂಥದೇ ಅರ್ಥವನ್ನು ಹೊಂದಿರುತ್ತದೆ;

(ಬಿ) "ಸಿನಿಮಾ ಕೆಲಸಗಾರ" ಎಂದರೆ,–

(i) ಕಲಾವಿದ (ನಟ, ಸಂಗೀತಗಾರ ಅಥವಾ ನರ್ತಕನನ್ನು ಒಳಗೊಂಡು) ಕೆಲಸ ಮಾಡಲು ಅಥವಾ ಕುಶಲ, ಅಕುಶಲ, ದೈಹಿಕ, ಮೇಲ್ವಿಚಾರಕ, ತಾಂತ್ರಿಕ, ಕಲಾತ್ಮಕ ಅಥವಾ ಬೇರೆ ರೀತಿಯ ಯಾವುದೇ ಕೆಲಸವನ್ನು ಮಾಡಲು ಐದು ಫೀಚರ್ ಫಿಲ್ಮುಗಳಿಗೆ ಕಡಿಮೆ ಇಲ್ಲದಂತೆ ಅವುಗಳ ತಯಾರಿಕೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ನೇರವಾಗಿ ಅಥವಾ ಯಾವನೇ ಕಂಟ್ರಾಕ್ಟರನ ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ನಿಯೋಜಿತನಾಗಿರುವ; ಮತ್ತು

(ii) ಯಾವುವೇ ಐದು ಫೀಚರ್ ಫಿಲ್ಮುಗಳ ಪೈಕಿ ಪ್ರತಿಯೊಂದರ ತಯಾರಿಕೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಅಂಥ ನಿಯೋಜನೆಯ ಸಂಬಂಧದಲ್ಲಿ ಯಾರ ಪರಿಶ್ರಮ ಧನವು, ಮಾಸಿಕ ಮಜೂರಿಗಳ ರೂಪದಲ್ಲಿ ಪ್ರತಿ ತಿಂಗಳಿಗೆ ಒಂದು ಸಾವಿರದ ಆರುನೂರು ರೂಪಾಯಿಗಳ ಮೊತ್ತವನ್ನು ಮತ್ತು ಒಂದೇ ಮೊತ್ತದ ರೂಪದಲ್ಲಿ ಎಂಟು ಸಾವಿರ ರೂಪಾಯಿಗಳ ಮೊತ್ತವನ್ನು ಮೀರಿಲ್ಲವೋ ಆ ಪರಿಶ್ರಮ ಧನವನ್ನು ಪಡೆಯುವ

– ವ್ಯಕ್ತಿ.

(ಸಿ) "ಫೀಚರ್ ಫಿಲ್ಮ್" ಎಂದರೆ ಒಂದು ರೂಪ ವಿಧಾನ ಮತ್ತು ಕಥಾವಸ್ತುವನ್ನು ಮುಖ್ಯವಾಗಿ ಸಂಭಾಷಣೆಗಳ ಮೂಲಕ ಮತ್ತು ಕಥನರೂಪ, ಉತ್ಸಾಹ ಅಥವಾ ಕಾರ್ಟೂನ್ ನಿರೂಪಣೆಯ ಮೂಲಕ ಅಪೂರ್ಣವಾಗಿ ತೋರಿಸಲಾಗಿರುವ, ಅಥವಾ ಹಲವಾರು ನಟನ ಪಾತ್ರಗಳ ಸುತ್ತ ಕಲ್ಪಿಸಿದ ಕಥೆಯೊಂದಿಗೆ ಭಾರತದಲ್ಲಿ ಪೂರ್ಣವಾಗಿ ಅಥವಾ ಭಾಗಶ: ತಯಾರಿಸಿದ ಪೂರ್ಣ ಪ್ರಮಾಣದ ಸಿನಿಮಾ, ಆದರೆ ಅದು ಜಾಹಿರಾತು ಫಿಲ್ಮನ್ನು ಒಳಗೊಳ್ಳುವುದಿಲ್ಲ;

(ಡಿ) "ನಿಧಿ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ಚಲನಚಿತ್ರ ಕೆಲಸಗಾರರ ಕಲ್ಯಾಣ ನಿಧಿ;

(ಇ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಫ್) ಫೀಚರ್ ಫಿಲ್ಮಿಗೆ ಸಂಬಂಧಪಟ್ಟಂತೆ "ನಿರ್ಮಾಪಕ" ಎಂದರೆ ಅಂಥ ಫಿಲ್ಮನ್ನು ತಯಾರಿಸುವುದಕ್ಕಾಗಿ (ಅಂಥ ಫಿಲ್ಮನ್ನು ತಯಾರಿಸುವುದಕ್ಕಾಗಿ ಹಣಕಾಸನ್ನೆತ್ತುವುದು ಮತ್ತು ಸಿನಿಮಾ ಕೆಲಸಗಾರರನ್ನು ತೊಡಗಿಸಿಕೊಳ್ಳುವುದನ್ನು ಒಳಗೊಂಡು) ಅವಶ್ಯವಾದ ವ್ಯವಸ್ಥೆಗಳನ್ನು ಯಾವನು ಕೈಗೊಳ್ಳುವನೋ ಆ ವ್ಯಕ್ತಿ.

**3. ಸಿನಿಮಾ ಕೆಲಸಗಾರರ ಕಲ್ಯಾಣ ನಿಧಿ.–** ಸಿನಿಮಾ ಕೆಲಸಗಾರರ ಕಲ್ಯಾಣ ನಿಧಿ ಎಂದು ಕರೆಯಲಾಗುವ ನಿಧಿಯೊಂದನ್ನು ರಚಿಸತಕ್ಕದ್ದು ಮತ್ತು ಅದಕ್ಕೆ,–

(ಎ) ಕೇಂದ್ರ ಸರ್ಕಾರವು ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತಿನಿಂದ ಕ್ರಮಬದ್ಧವಾದ ವಿನಿಯೋಜನೆಯನ್ನು ಮಾಡಿಕೊಂಡ ತರುವಾಯ ಉತ್ಪಾದನಾ ಸುಂಕದ ಉತ್ಪತ್ತಿಗಳಿಂದ ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ನಿರ್ಧರಿಸಿದಂತೆ ಸಂಗ್ರಹಣ ಖರ್ಚನ್ನು ಕಳೆದುಕೊಂಡ ತರುವಾಯ ಸಿನಿಮಾ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1981ರ 5ನೇ ಪ್ರಕರಣದ ಮೇರೆಗೆ ಜಮೆ ಮಾಡಿದ ಆ ಉತ್ಪತ್ತಿಗಳಿಂದ ಒದಗಿಸಬಹುದಾದಂಥ ಮೊಬಲಗುಗಳು;

(ಬಿ) ಕೇಂದ್ರ ಸರ್ಕಾರದಿಂದ ನಿಧಿಗೆ ಕೊಟ್ಟ ಯಾವುವೇ ಅನುದಾನಗಳು;

(ಸಿ) ಈ ಅಧಿನಿಯಮದ ಉದ್ದೇಶಗಳಿಗಾಗಿ ದೇಣಿಗೆಗಳೆಂದು ಸ್ವೀಕರಿಸಿದ ಯಾವುದೇ ಹಣ;

(ಡಿ) ನಿಧಿಯಲ್ಲಿನ ಮೊಬಲಗುಗಳ ಹೂಡಿಕೆಯಿಂದ ಬಂದ ಯಾವುದೇ ಆದಾಯ;

– ಇವುಗಳನ್ನು ಜಮೆ ಮಾಡತಕ್ಕದ್ದು.

**4. ನಿಧಿಯ ವಿನಿಯೋಗ.–** (1) ಆ ನಿಧಿಯನ್ನು ಕೇಂದ್ರ ಸರ್ಕಾರವು, ಆ ಸರ್ಕಾರದ ಅಭಿಪ್ರಾಯದಲ್ಲಿ ಸಿನಿಮಾ ಕೆಲಸಗಾರರ ಕಲ್ಯಾಣವನ್ನು ಸಂವರ್ಧಿಸಲು ಅವಶ್ಯ ಅಥವಾ ವಿಹಿತವಾಗಿರುವ ಕ್ರಮಗಳು ಮತ್ತು ಸೌಲಭ್ಯಗಳಿಗೆ ಸಂಬಂಧಿಸಿದಂತೆ ವಹಿಸಿದ ವೆಚ್ಚವನ್ನು ಭರಿಸಲು ಮತ್ತು ವಿಶೇಷವಾಗಿ,–

(ಎ) ಕೇಂದ್ರ ಸರ್ಕಾರವು ತೀರ್ಮಾನಿಸಬಹುದಾದಂತೆ ಸಿನಿಮಾ ಕೆಲಸಗಾರರ ಪ್ರಯೋಜನಕ್ಕಾಗಿ ಅಂಥ ಕಲ್ಯಾಣ ಕ್ರಮಗಳ ಅಥವಾ ಸೌಲಭ್ಯಗಳ ಖರ್ಚನ್ನು ಭರಿಸಲು;

(ಬಿ) ಆರ್ಥಿಕವಾಗಿ ತೊಂದರೆಯಲ್ಲಿರುವ ಸಿನಿಮಾ ಕೆಲಸಗಾರರಿಗೆ ಅನುದಾನಗಳು ಅಥವಾ ಸಾಲಗಳ ರೂಪದಲ್ಲಿ ನೆರವನ್ನು ಒದಗಿಸಲು;

(ಸಿ) ಕೇಂದ್ರ ಸರ್ಕಾರವು ಅನುಮೋದಿಸಿರುವಂಥ ಕುಟುಂಬ ಕಲ್ಯಾಣ, ಕುಟುಂಬ ಯೋಜನೆ, ಶಿಕ್ಷಣ ಮತ್ತು ಸೇವೆಗಳನ್ನು ಒಳಗೊಂಡಂತೆ ಸಿನಿಮಾ ಕೆಲಸಗಾರರ ಯಾವುದೇ ಕಲ್ಯಾಣ ಯೋಜನೆಗೆ ನೆರವನ್ನು ನೀಡಲು ಯಾವುದೇ ಹಣವನ್ನು ಮಂಜೂರು ಮಾಡಲು;

(ಡಿ) ಅನುಕ್ರಮವಾಗಿ 5ನೇ ಮತ್ತು 6ನೇ ಪ್ರಕರಣಗಳ ಮೇರೆಗೆ ರಚಿಸಲಾದ ಸಲಹಾ ಸಮಿತಿಗಳ ಮತ್ತು ಕೇಂದ್ರ ಸಲಹಾ ಸಮಿತಿಯ ಸದಸ್ಯರುಗಳ ಭತ್ಯಗಳು, ಯಾವುವಾದರೂ ಇದ್ದರೆ, ಅವುಗಳನ್ನು ಭರಿಸಲು ಮತ್ತು 8ನೇ ಪ್ರಕರಣದ ಮೇರೆಗೆ ನೇಮಕಗೊಂಡ ವ್ಯಕ್ತಿಗಳ ಸಂಬಳಗಳು ಮತ್ತು ಭತ್ಯಗಳು, ಯಾವುವಾದರೂ ಇದ್ದರೆ ಅವುಗಳನ್ನು ಭರಿಸಲು;

(ಇ) ಕೇಂದ್ರ ಸರ್ಕಾರವು ನಿಧಿಯಿಂದ ಭರಿಸಬೇಕೆಂದು ನಿರ್ದೇಶಿಸಬಹುದಾದಂಥ ಯಾವುದೇ ಇತರ ವೆಚ್ಚ

– ಇವುಗಳಿಗಾಗಿ ವಿನಿಯೋಗಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ಯಾವುದೇ ನಿರ್ದಿಷ್ಟ ವೆಚ್ಚವನ್ನು ನಿಧಿಗೆ ಖರ್ಚು ಹಾಕಬಹುದೇ ಹೇಗೆ ಎಂಬುದನ್ನು ತೀರ್ಮಾನಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**5. ಸಲಹಾ ಸಮಿತಿಗಳು.–** (1) ಕೇಂದ್ರ ಸರ್ಕಾರವು, ನಿಧಿಯ ವಿನಿಯೋಗಕ್ಕೆ ಸಂಬಂಧಪಟ್ಟ ವಿಷಯವನ್ನೊಳಗೊಂಡು ಆ ಸರ್ಕಾರವು ಅದಕ್ಕೆ ಒಪ್ಪಿಸಬಹುದಾದಂತೆ ಈ ಅಧಿನಿಯಮವನ್ನು ಜಾರಿಗೊಳಿಸುವುದರಿಂದ ಉದ್ಭವಿಸುವಂಥ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಲು ಅದು ಸೂಕ್ತವೆಂದು ಯೋಚಿಸುವಷ್ಟು ಸಂಖ್ಯೆಯ ಸಲಹಾ ಸಮಿತಿಗಳನ್ನು ರಚಿಸಬಹುದು.

(2) ಪ್ರತಿಯೊಂದು ಸಲಹಾ ಸಮಿತಿಯು, ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು ಮತ್ತು ಆ ಸದಸ್ಯರನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಆಯ್ಕೆ ಮಾಡತಕ್ಕದ್ದು:

ಪರಂತು, ಪ್ರತಿಯೊಂದು ಸಲಹಾ ಸಮಿತಿಯು, ಸರ್ಕಾರ, ಸಿನಿಮಾ ಕೆಲಸಗಾರರು ಮತ್ತು ನಿರ್ಮಾಪಕರನ್ನು ಪ್ರತಿನಿಧಿಸುವ ಸಮ ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಪ್ರತಿಯೊಂದು ಸಲಹಾ ಸಮಿತಿಯ ಅಧ್ಯಕ್ಷನನ್ನು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು.

(4) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರತಿಯೊಂದು ಸಲಹಾ ಸಮಿತಿಯ ಸದಸ್ಯರ ಹೆಸರುಗಳನ್ನು ಪ್ರಕಟಿಸತಕ್ಕದ್ದು.

**6. ಕೇಂದ್ರ ಸಲಹಾ ಸಮಿತಿ.–** (1) ಕೇಂದ್ರ ಸರ್ಕಾರವು, 5ನೇ ಪ್ರಕರಣದ ಮೇರೆಗೆ ರಚಿಸಿದ ಸಲಹಾ ಸಮಿತಿಗಳ ಕೆಲಸವನ್ನು ಸಮನ್ವಯಗೊಳಿಸಲು ಮತ್ತು ಈ ಅಧಿನಿಯಮವನ್ನು ಜಾರಿಗೊಳಿಸುವುದರಿಂದ ಉದ್ಭವಿಸುವ ಯಾವುದೇ ವಿಷಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಲು ಕೇಂದ್ರ ಸಲಹಾ ಸಮಿತಿಯನ್ನು ರಚಿಸಬಹುದು.

(2) ಆ ಕೇಂದ್ರ ಸಲಹಾ ಸಮಿತಿಯು ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಆ ಸದಸ್ಯರನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಆಯ್ಕೆ ಮಾಡತಕ್ಕದ್ದು:

ಪರಂತು, ಕೇಂದ್ರ ಸಲಹಾ ಸಮಿತಿಯು ಸರ್ಕಾರ, ಸಿನಿಮಾ ಕೆಲಸಗಾರರು ಮತ್ತು ನಿರ್ಮಾಪಕರನ್ನು ಪ್ರತಿನಿಧಿಸುವ ಕನಿಷ್ಠ ಪಕ್ಷ ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಕೇಂದ್ರ ಸಲಹಾ ಸಮಿತಿಯ ಅಧ್ಯಕ್ಷನನ್ನು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು.

(4) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಕೇಂದ್ರ ಸಲಹಾ ಸಮಿತಿಯ ಸದಸ್ಯರ ಹೆಸರುಗಳನ್ನು ಪ್ರಕಟಿಸತಕ್ಕದ್ದು.

**7. ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳುವ ಅಧಿಕಾರ, ಇತ್ಯಾದಿ.–** (1) ಸಲಹಾ ಸಮಿತಿ ಅಥವಾ ಕೇಂದ್ರ ಸಲಹಾ ಸಮಿತಿಯು, ಯಾವುದೇ ಕಾಲದಲ್ಲಿ ಮತ್ತು ಅದು ಸೂಕ್ತವೆಂದು ಯೋಚಿಸುವಂಥ ಅವಧಿಯವರೆಗೆ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಸಲಹಾ ಸಮಿತಿಗೆ ಸಹ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಸಹಯೋಜಿತನಾದ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಸದಸ್ಯನ ಎಲ್ಲಾ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು. ಆದರೆ ಅವನು ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(3) ಸಲಹಾ ಸಮಿತಿ ಅಥವಾ ಕೇಂದ್ರ ಸಲಹಾ ಸಮಿತಿಯು, ಅದರ ಸಭೆಗೆ ಹಾಜರಾಗಲು ಯಾವನೇ ವ್ಯಕ್ತಿಯನ್ನು ಆಹ್ವಾನಿಸುವುದು ಅವಶ್ಯ ಅಥವಾ ವಿಹಿತವೆಂದು ಪರ್ಯಾಲೋಚಿಸಿದರೆ ಹಾಗೆ ಮಾಡಬಹುದು ಮತ್ತು ಅಂಥ ವ್ಯಕ್ತಿಯು ಯಾವುದೇ ಸಭೆಗೆ ಹಾಜರಾದಾಗ ಅವನು ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**8. ಕಲ್ಯಾಣ ಕಮೀಷನರ್‌ಗಳು, ಇತ್ಯಾದಿಯವರ ನೇಮಕಾತಿ ಮತ್ತು ಅವರ ಅಧಿಕಾರಗಳು.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮ ಮತ್ತು ಸಿನಿಮಾ ಕೆಲಸಗಾರರ ಉಪಕರ ಅಧಿನಿಯಮ, 1981ರ ಉದ್ದೇಶಗಳಿಗಾಗಿ, ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ಸಾಕಷ್ಟು ಸಂಖ್ಯೆಯ ಕಲ್ಯಾಣ ಕಮೀಷನರುಗಳು, ಕಲ್ಯಾಣ ಆಡಳಿತಗಾರರು, ಪರಿಶೀಲಕರು ಮತ್ತು ಇತರ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಬಹುದು.

(2) ಕೇಂದ್ರ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಕಲ್ಯಾಣ ಕಮೀಷನರನಿಗೆ ಈ ಅಧಿನಿಯಮ ಮತ್ತು ಸಿನಿಮಾ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1981ರ ಉದ್ದೇಶಗಳಿಗಾಗಿ, ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ಸಿಬ್ಬಂದಿಯನ್ನು ನೇಮಕ ಮಾಡಲು ನಿರ್ದೇಶಿಸಬಹುದು.

(3) ಈ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರನಾಗಿರುವುದಾಗಿ ಭಾವಿಸತಕ್ಕದ್ದು.

(4) ಯಾವನೇ ಕಲ್ಯಾಣ ಕಮೀಷನರನು,–

(ಎ) ಅವನು ಸೂಕ್ತವೆಂದು ಯೋಚಿಸಬಹುದಾದಂಥ ಸಹಾಯಕರು, ಯಾರಾದರೂ ಇದ್ದರೆ, ಅವರೊಂದಿಗೆ ಈ ಅಧಿನಿಯಮ ಮತ್ತು ಸಿನಿಮಾ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1981ರ

ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಯಾವುದೇ ಯುಕ್ತ ಕಾಲದಲ್ಲಿ ಅವನು ಪ್ರವೇಶಿಸಲು ಅವಶ್ಯವೆಂದು ಪರ್ಯಾಲೋಚಿಸುವಂಥ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು.

(ಬಿ) ಅಂಥ ಸ್ಥಳದೊಳಗೆ ಅವನ ಕರ್ತವ್ಯಗಳ ಯುಕ್ತ ನಿರ್ವಹಣೆಗಾಗಿ ಅವಶ್ಯವಾದ ಯಾವುದೇ ಕಾರ್ಯವನ್ನು ಮಾಡಬಹುದು; ಮತ್ತು

(ಸಿ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

**9. ಈ ಅಧಿನಿಯಮದ ಮೇರೆಗೆ ಹಣಕಾಸು ಒದಗಿಸಿದ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿ.–** ಕೇಂದ್ರ ಸರ್ಕಾರವು, ಆದಷ್ಟು ಬೇಗ, ಪ್ರತಿಯೊಂದು ಹಣಕಾಸು ವರ್ಷವು ಕೊನೆಗೊಂಡ ತರುವಾಯ ಲೆಕ್ಕಪತ್ರಗಳ ವಿವರಪತ್ರದೊಂದಿಗೆ ಆ ಹಣಕಾಸು ವರ್ಷದಲ್ಲಿ ಈ ಅಧಿನಿಯಮದ ಮೇರೆಗೆ ಹಣಕಾಸು ಒದಗಿಸಿದ ಚಟುವಟಿಕೆಗಳ ಬಗ್ಗೆ ವಿವರವನ್ನು ಕೊಡುವ ವರದಿಯನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟವಾಗುವಂತೆ ಮಾಡತಕ್ಕದ್ದು.

**10. ಮಾಹಿತಿಯನ್ನು ತರಿಸಿಕೊಳ್ಳುವ ಅಧಿಕಾರ.–** (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಅವಧಿಯೊಳಗೆ ಅಂಥ ಅಂಕಿ ಅಂಶಗಳು ಮತ್ತು ಇತರ ಮಾಹಿತಿಯನ್ನು ಒದಗಿಸಲು ನಿರ್ಮಾಪಕನನ್ನು ಅಗತ್ಯಪಡಿಸಬಹುದು.

**11. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳನ್ನು,–

(ಎ) ಆ ನಿಧಿಯನ್ನು 4ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕ್ರಮಗಳು ಮತ್ತು ಸೌಲಭ್ಯಗಳಿಗಾಗಿ ವಿನಿಯೋಗಿಸಬಹುದಾದಂಥ ರೀತಿ;

(ಬಿ) 4ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಯಾವುದೇ ಸಾಲದ ಮಂಜೂರಾತಿಗೆ ಅನ್ವಯಿಸುವ ಷರತ್ತುಗಳು;

(ಸಿ) ಅನುಕ್ರಮವಾಗಿ 5ನೇ ಮತ್ತು 6ನೇ ಪ್ರಕರಣಗಳ ಮೇರೆಗೆ ರಚಿತವಾದ ಸಲಹಾ ಸಮಿತಿಗಳು ಮತ್ತು ಕೇಂದ್ರ ಸಲಹಾ ಸಮಿತಿಯ ರಚನೆ, ಅವುಗಳ ಸದಸ್ಯರನ್ನು ಆಯ್ಕೆ ಮಾಡತಕ್ಕಂಥ ರೀತಿ, ಅಂಥ ಸದಸ್ಯರ ಪದಾವಧಿ, ಅವರಿಗೆ ಸಂದಾಯ ಮಾಡಬೇಕಾದ ಭತ್ಯಗಳು ಯಾವುದಾದರೂ ಇದ್ದರೆ, ಅವು ಮತ್ತು ಸಲಹಾ ಸಮಿತಿಗಳು ಮತ್ತು ಕೇಂದ್ರ ಸಲಹಾ ಸಮಿತಿಯು ವ್ಯವಹಾರವನ್ನು ನಡೆಸತಕ್ಕಂಥ ರೀತಿ;

(ಡಿ) 8ನೇ ಪ್ರಕರಣದ ಮೇರೆಗೆ ನೇಮಕಗೊಂಡ ಎಲ್ಲಾ ವ್ಯಕ್ತಿಗಳ ನೌಕರಿ ಭರ್ತಿ, ಸೇವಾ ಷರತ್ತುಗಳು, ಮತ್ತು ಕರ್ತವ್ಯಗಳು;

(ಇ) 8ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕಲ್ಯಾಣ ಕಮೀಷನರ್, ಕಲ್ಯಾಣ ಆಡಳಿತಗಾರ ಮತ್ತು ಪರಿಶೀಲಕನು ಚಲಾಯಿಸಬಹುದಾದ ಅಧಿಕಾರಗಳು;

(ಎಫ್) 10ನೇ ಪ್ರಕರಣದ ಮೇರೆಗೆ ಒದಗಿಸಬೇಕೆಂದು ಅಗತ್ಯಪಡಿಸಬಹುದಾದಂಥ ಅಂಕಿ ಅಂಶಗಳು ಮತ್ತು ಇತರ ಮಾಹಿತಿಯನ್ನು ನಿರ್ಮಾಪಕನು ಕೇಂದ್ರ ಸರ್ಕಾರಕ್ಕೆ ಒದಗಿಸುವುದು;

(ಜಿ) (ಎಫ್) ಖಂಡದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾವ ಅವಧಿಯೊಳಗೆ ಆ ಅಂಕಿಅಂಶಗಳು ಮತ್ತು ಇತರ ಮಾಹಿತಿಗಳನ್ನು ಒದಗಿಸಬೇಕಾಗಿದೆಯೋ ಆ ನಮೂನೆ ಮತ್ತು ಅವಧಿ;

(ಹೆಚ್) ಈ ಅಧಿನಿಯಮದ ಮೇರೆಗಿನ ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ

– ಇವುಗಳ ಬಗ್ಗೆ ಉಪಬಂಧಿಸಬಹುದು.

(3) (2)ನೇ ಉಪಪ್ರಕರಣದ (ಎಫ್) ಖಂಡ ಅಥವಾ (ಜಿ) ಖಂಡದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಲ್ಲಿ, ಕೇಂದ್ರ ಸರ್ಕಾರವು, ಅಂಥ ನಿಯಮದ ಉಲ್ಲಂಘನೆಯು ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದೆಂದು ನಿರ್ದೇಶಿಸಬಹುದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

*****